**Code No. 20 Y**

## ವಾಣಿಜ್ಯ ಪರೀಕ್ಷೆಗಳು

# ಕನ್ನಡ ಶೀಘ್ರಲಿಪಿ — ಪ್ರಥಮ ದರ್ಜೆ — ದ್ವಿತೀಯ ಪತ್ರಿಕೆ

## (ಸೂತ್ರಗಳು)

ಜನವರಿ, 2019

ಸಮಯ : 1 ಗಂಟೆ 30 ನಿಮಿಷಗಳು

ಅಂಕಗಳು : 100

***ಸೂಚನೆ :*** ಉತ್ತರಗಳು ಸಂಕ್ಷಿಪ್ತ ಹಾಗೂ ನೇರವಾಗಿರಬೇಕು.

1. ಸ್ತ–ಷ್ಟ ಕುಣಿಕೆ ಉಪಯೋಗಿಸುವ ವಿಧಾನಗಳನ್ನು ಉದಾಹರಣೆಯೊಂದಿಗೆ ವಿವರಿಸಿ. 10

2. ಆದಿ ಕೊಕ್ಕೆಗಳಿಗೆ ವೃತ್ತ ಸೇರಿಸುವಿಕೆ ನಿಯಮಗಳನ್ನು ಉದಾಹರಣೆಯೊಂದಿಗೆ ವಿವರಿಸಿ. 10

3. ಅರ್ಧ ವೃತ್ತಗಳ ನಿಯಮಗಳನ್ನು ಉದಾಹರಣೆಯೊಂದಿಗೆ ವಿವರಿಸಿ. 10

4. ಈ ಕೆಳಗಿನವುಗಳಲ್ಲಿ ಯಾವುದಾದರೂ **ನಾಲ್ಕಕ್ಕೆ** ಟಿಪ್ಪಣಿ ಬರೆಯಿರಿ : 4 × 5 = 20

   ಅ) ಸಣ್ಣ ವೃತ್ತ–ಅಂತ್ಯಪ್ರತ್ಯಯಗಳು

   ಆ) ದ್ವಿರೂಪ ವ್ಯಂಜನ ‘ಯ’

   ಇ) ತೃತೀಯ ಮತ್ತು ಸಪ್ತಮಿ ವಿಭಕ್ತಿ ಪ್ರತ್ಯಯಗಳು

   ಈ) ಎಡರೂಪ ವರ್, ತರ್, ದರ್

   ಉ) ಸ–ಸ ದೊಡ್ಡ ವೃತ್ತಗಳು

5. ಈ ಕೆಳಗಿನವುಗಳಲ್ಲಿ ಯಾವುದಾದರೂ ***ಐದು*** ಪದಗಳಿಗೆ ಸಂಕ್ಷೇಪಣೆ ಬರೆಯಿರಿ : 5 × 1 = 5

   ಅ) ರಾಷ್ಟ್ರಾಧ್ಯಕ್ಷ

   ಆ) ನಗರೀಕರಣ

   ಇ) ಮೀನುಗಾರಿಕೆ

   ಈ) ಮುಂದಾಲೋಚನೆ

   ಉ) ಹಣ್ಣುಹಂಪಲು

   ಊ) ಸಾರ್ವಜನಿಕ

6. ಈ ಕೆಳಗಿನವುಗಳಲ್ಲಿ ಯಾವುದಾದರೂ ***ಐದಕ್ಕೆ*** ಪದಗಳ ಸಮೂಹ ಬರೆಯಿರಿ : 5 × 1 = 5

ಅ) ಜವಾಬ್ದಾರಿ ಸರ್ಕಾರ

ಆ) ಗ್ರಂಥ ಭಂಡಾರ

ಇ) ಕೇಂದ್ರ ಶಿಕ್ಷಣ ಸಲಹಾವಾರು

ಈ) ಶ್ರೇಷ್ಠ ನ್ಯಾಯಾಧಿಪತಿ

ಉ) ರಕ್ಷಣಾ ಸಚಿವ ಶಾಖೆ

ಊ) ಐತೀರ್ಪು

7. ಈ ಕೆಳಗಿನವುಗಳಲ್ಲಿ ಯಾವುದಾದರೂ ***ಐದಕ್ಕೆ*** ಭೇದಿಸುವಿಕೆ ಪದಗಳನ್ನು ಬರೆಯಿರಿ : 5 × 1 = 5

ಅ) ನಮ್ಮೆದುರು ಪಕ್ಷದವರು

ಆ) ಅಧಿಕೃತ ಜ್ಞಾಪನ ಪತ್ರ

ಇ) ಗ್ರಾಮ ಪುನರುಜ್ಜೀವನ

ಈ) ಸತ್ಯ ಮತ್ತು ಅಹಿಂಸೆ

ಉ) ಇರಲಿ ಇಲ್ಲದಿರಲಿ

ಊ) ಕೋಮುವಾರು ಭಾವನೆ

8. ಈ ಕೆಳಗಿನ ಖಾಲಿ ಜಾಗಗಳನ್ನು ಸೂಕ್ತ ಉತ್ತರಗಳಿಂದ ಭರ್ತಿ ಮಾಡಿ : 5 × 1 = 5

ಅ) ಸಣ್ಣ ಕುಣಿಕೆಯನ್ನು ರೇಖಾಕ್ಷರದ ಅಂತ್ಯದಲ್ಲಿ ಬರೆದರೆ ಅದು ..................... ಎಂಬುದನ್ನು ಸೂಚಿಸುತ್ತದೆ.

ಆ) ಸರಳ ರೇಖಾಕ್ಷರಗಳಿಗೆ ಅಂತ್ಯದಲ್ಲಿ ಎಡದಿಂದ ಬಲಕ್ಕೆ ಒಂದು ಸಣ್ಣ ಕೊಕ್ಕೆಯನ್ನು ಬರೆದರೆ ಅದು ..................... ಸಂಯೋಗವನ್ನು ಸೂಚಿಸುತ್ತದೆ.

ಇ) ಎಡರೂಪದ 'ದ' ರೇಖಾಕ್ಷರವನ್ನು ಇಮ್ಮಡಿ ಮಾಡಿ ಅಂತ್ಯದಲ್ಲಿ ಬರೆದರೆ ..................... ಎಂಬುದನ್ನು ಸೂಚಿಸುತ್ತದೆ.

ಈ) ರೇಖಾಕ್ಷರದ ಅಂತ್ಯದಲ್ಲಿ ಅಧೋಮುಖ 'ರ' ವನ್ನು ರೇಖಾಕ್ಷರವನ್ನು ಭೇದಿಸಿದರೆ ..................... ಎಂದಾಗುತ್ತದೆ.

ಉ) ಎರಡು ವಕ್ರ ರೇಖಾಕ್ಷರಗಳ ಅಥವಾ ವಕ್ರ ರೇಖಾಕ್ಷರ ಮತ್ತು ಸಮಾಕ್ಷರದ ನಡುವೆ ಬರುವ ವೃತ್ತವನ್ನು ..................... ಒಳಗಡೆ ಬರೆಯಬೇಕು.

9. ಈ ಕಳಗೆ ಕೊಟ್ಟಿರುವ ವಿಷಯವನ್ನು ಶೀಘ್ರಲಿಪಿಯಲ್ಲಿ ಅಗತ್ಯವಿರುವ ಕಡೆ ಸ್ವರಚಿಹ್ನೆಗಳನ್ನು ಉಪಯೋಗಿಸಿ ಬರೆಯಿರಿ : 30

ದೇಶದ ಜನರಿಗೆಲ್ಲಾ ಮಾಡಲು ಕೆಲಸವಿದ್ದರೆ ದೇಶ ಸುಭಿಕ್ಷವಾಗಿರುತ್ತದೆ. ಜನರಿಗೆ ಮಾಡಲು ಸಾಕಷ್ಟು ಕೆಲಸಗಳಿದ್ದರೆ ಕಳ್ಳತನ, ವಂಚನೆ, ಸುಲಿಗೆ ಮುಂತಾದವುಗಳು ಸದಾ ಕಡಿಮೆಯಾಗುತ್ತವೆ. ಉದ್ಯೋಗಗಳ ಸಂಖ್ಯೆಯನ್ನು ಹೆಚ್ಚಿಸಿದಷ್ಟೂ ಜನರಲ್ಲಿ ನೆಮ್ಮದಿ ಹೆಚ್ಚುತ್ತದೆ. ಗುಜರಾತ್ ರಾಜ್ಯದಲ್ಲಿ ನರೇಂದ್ರ ಮೋದಿ ಸರ್ಕಾರವು ಸುಮಾರು ಎಂಟು ನೂರಕ್ಕೂ ಹೆಚ್ಚು ಉದ್ಯೋಗಗಳಲ್ಲಿ ಜನರಿಗೆ ತರಬೇತಿ ನೀಡುತ್ತಿದ್ದು, ಗ್ರಾಮೀಣ ಭಾಗಗಳಲ್ಲಿ ನಿರುದ್ಯೋಗ ಬಹಳಷ್ಟು ಕಡಿಮೆಯಾಗಿದೆಯಂತೆ. ಭಾರತ ದೇಶದಲ್ಲಿರುವ ಎಲ್ಲಾ ರಾಜ್ಯ ಸರ್ಕಾರಗಳು ಇದೇ ರೀತಿಯ ತರಬೇತಿ ವ್ಯವಸ್ಥೆಯನ್ನು ಮಾಡಿ ನಿರುದ್ಯೋಗ ಸಮಸ್ಯೆ ಬಹಳಷ್ಟು ಕಡಿಮೆಯಾಗುತ್ತದೆ. ಕೆ.ಆರ್.ಎಸ್. ಡ್ಯಾಂ ನಿರ್ಮಾಣದಿಂದ ಲಕ್ಷಾಂತರ ಎಕರೆ ಜಮೀನಿಗೆ ನೀರು ದೊರೆತು ಸಹಸ್ರಾರು ರೈತರ ಜೀವನ ಮಟ್ಟ ಸುಧಾರಿಸಿತು.

ಭದ್ರಾವತಿ ಕಬ್ಬಿಣ ಕಾರ್ಖಾನೆಯಲ್ಲಿ ಕಬ್ಬಿಣ ಉತ್ಪಾದನೆಯಿಂದ ಸಹಸ್ರಾರು ಜನರಿಗೆ ಉದ್ಯೋಗ ದೊರಕಿದೆ. ಹಾಗೆಯೇ ಹೆಬ್ಬಾಳದ ವ್ಯವಸಾಯ ಕಾಲೇಜು, ಗಂಧದ ಎಣ್ಣೆ ಫ್ಯಾಕ್ಟರಿ ವ್ಯವಸಾಯದ ಉಪಕರಣಗಳನ್ನು ತಯಾರಿಸುವ ಕಾರ್ಖಾನೆ, ಕನ್ನಡ ಸಾಹಿತ್ಯ ಪರಿಷತ್, ಮೈಸೂರು ವಿಶ್ವವಿದ್ಯಾಲಯ ಮುಂತಾದವುಗಳನ್ನು ಸ್ಥಾಪಿಸಿ ಜನರನ್ನು ವಿದ್ಯಾವಂತರನ್ನಾಗಿ ಮಾಡಿ ಉದ್ಯೋಗಗಳನ್ನು ಸೃಷ್ಟಿಸಲು ಅನೇಕ ಯೋಜನೆಗಳನ್ನು ಕಾರ್ಯರೂಪಕ್ಕೆ ತಂದರು. ಹಾಗೆಯೇ ವಿದ್ಯಾವಂತ ಜನರು ಸರ್ಕಾರಿ ಉದ್ಯೋಗಗಳಿಗೆ ಕಾಯದೇ ತಮ್ಮದೇ ಆದ ಯೋಜನೆಗಳನ್ನು ಕಾರ್ಯರೂಪಕ್ಕೆ ತಂದರು. ಜನರು ಸರ್ಕಾರಿ ಉದ್ಯೋಗಗಳಿಗೆ ಕಾಯದೇ ತಮ್ಮದೇ ಆದ ಉದ್ಯಮಗಳನ್ನು ಸ್ಥಾಪಿಸಬೇಕು.

ಸರ್ಕಾರ ಜನರಿಗೆ ತರಬೇತಿ, ಬ್ಯಾಂಕುಗಳ ಮೂಲಕ ಹಣಕಾಸಿನ ಅನುಕೂಲ ಮತ್ತು

ತಯಾರಿಸಿದ ವಸ್ತುಗಳಿಗೆ ಮಾರುಕಟ್ಟೆ ವ್ಯವಸ್ಥೆ ಮುಂತಾದವುಗಳನ್ನು ಮಾಡಬೇಕು. ಹಳ್ಳಿಗಳಲ್ಲಿ ರೈತರು ವ್ಯವಸಾಯದ ಜೊತೆಗೆ ಹಾಲು ಉತ್ಪಾದನೆ ತೋಟಗಾರಿಕೆ, ಫಲಪುಷ್ಪಗಳನ್ನು ಬೆಳೆಯುವುದು ಮುಂತಾದ ಉಪಕಸುಬುಗಳಿಂದ ತಮ್ಮ ಬಿಡುವಿನ ವೇಳೆಯಲ್ಲಿ ದುಡಿದು ತಮ್ಮ ಆರ್ಥಿಕ ಮಟ್ಟವನ್ನು ಹೆಚ್ಚಿಸಿಕೊಳ್ಳಬಹುದು. ಹೀಗೆ ಸರ್ಕಾರ ಸಾರ್ವಜನಿಕರು, ಸ್ವಯಂ ಸೇವಾ ಸಂಸ್ಥೆಗಳು ಹೊಸ ಉದ್ಯೋಗಗಳನ್ನು ಸೃಷ್ಟಿಸಿ ಜನರ ನಿರುದ್ಯೋಗ ಕಡಿಮೆಯಾಗಿ ಜನ ನೆಮ್ಮದಿಯ ಜೀವನ ನಡೆಸುವಂತಾಗಬೇಕು.